ಇಂತಹ ೯೫೧೭ ಪ್ರಕರಣಗಳಲ್ಲಿ ಅರ್ಜಿಗಳನ್ನು ಕರ್ನಾಟಕ ಹೈಕೋರ್ಟ್‌ಗೆ ಬಡ ಗೇಣಿದಾರರ ಪರವಾಗಿ ಸಲ್ಲಿಸಲಾಗಿದೆ. ಈ ಪೈಕಿ ೨,೯೪೬ ರಿಟ್ ಅರ್ಜಿಗಳು ತೀರ್ಮಾನವಾಗಿವೆ.

ಇವುಗಳ ವಿವರ ಈ ಕೆಳಗೆ ಕಂಡಂತೆ ಇದೆ.

೧.	ಪರಿಶಿಷ್ಟ ಜಾತಿ	...	೬೦
೨.	ಪರಿಶಿಷ್ಟ ವರ್ಗ	...	೧೪
೩.	ಇತರೆ	...	೨,೮೭೨
	ಒಟ್ಟಿಗೆ		೨,೯೪೬

ಈ ಬಗ್ಗೆ ಸಂತೋಲೆಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರಿಗೆ ಕಳುಹಿಸಿದ್ದು, ಇಂತಹ ಆರ್ಜಿ ಪ್ರಕರಣಗಳನ್ನು ಹಾಡುಂಕಿ ಮೇಲ್ಮನವಿಯಂತೆ ಜಿಲ್ಲಾ ಭೂಸುಧಾರಣೆ ಅಪೀಲು ಪ್ರಾಧಿಕಾರಗಳಲ್ಲಿ ಸಲ್ಲಿಸಲು ಜಿಲ್ಲಾ ಕಾನೂನು ನೆರವು ಸಮಿತಿಗಳಿಗೆ ಕಳುಹಿಸಿ ಕೊಡಲು ಸೂಚಿಸಲಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್. — ತಾವು ಎಲ್ಲಾ ಜಿಲ್ಲಾಧಿಕಾರಿಗಳು ಉಪ ವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರ್‌ರವರಿಗೆ ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದ್ದೀರಿ. ಆದರೆ ಹೈ-ಕೋರ್ಟ್ ನಿರ್ಣಯದ ಪ್ರಕಾರ ೩೨ ಸಾವಿರ ಕೇಸುಗಳು ಗೇಣಿದಾರರ ವಿರುದ್ಧವಾಗಿ ತೀರ್ಮಾನವಾಗಿವೆ. ಇವುಗಳನ್ನು ಮತ್ತೆ ಅಪೀಲು ಮಾಡಿಕೊಳ್ಳುವಂತೆ ಅವರು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೂ ಕೂಡ ಈ ಬಗ್ಗೆ ಅಪೀಲು ಮಾಡಿಕೊಳ್ಳುವ ಕಾರ್ಯವನ್ನು ತಾವು ತೆಗೆದುಕೊಂಡಿಲ್ಲ. ಇದನ್ನು ಅಪೀಲು ಮಾಡಿಕೊಂಡು ನಂತರ ಟ್ರಿಬ್ಯುನಲ್‌ಗೆ ಅವುಗಳನ್ನು ಕಳುಹಿಸಲು ಸಾಧ್ಯತೆ ಇದೆ. ಇದನ್ನು ನೀವು ಏತಕ್ಕೆ ಮಾಡಿಲ್ಲ? ಸುಮಾರು ೩೨ ಸಾವಿರ ಕೇಸುಗಳು ಇತ್ತೀಚೆಗೆ ಬಂದವುಗಳಲ್ಲ. ನೀವು ಅಧಿಕಾರಕ್ಕೆ ಬರುವುದಕ್ಕಿಂತಲು ಪಂಜಿನಿಂದ ಇರತಕ್ಕವು. ಆದ್ದರಿಂದ, ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ — ಈ ಪ್ರಕರಣಗಳನ್ನು ಪರಿಶೀಲಿಸಿ ಯೋಗ್ಯವಾದ ಪ್ರಕರಣ ಗಳೆಂದು ಕಂಡುಬಂದವುಗಳನ್ನು ಅಪೀಲು ಮಾಡಲು ಕ್ರಮಕೈಗೊಳ್ಳುತ್ತೇವೆ.

(ii) ರಾಜಾಜಿನಗರಕ್ಕೆ ಕಲುಷಿತ ನೀರು ಸರಬರಾಜಾಗುತ್ತಿರುವ ಬಗ್ಗೆ

ಶ್ರೀ ಎಂ.ಎಸ್. ಕೃಷ್ಣನ್. — ರಾಜಾಜಿನಗರದಲ್ಲಿ ಕಳೆದ ೧೫ ದಿವಸಗಳಿಂದ ಕಂಡಿಯುವ ನೀರಿನ ಜೊತೆ, ಮಣ್ಣು, ಹೆಂಟೆ ಇತ್ಯಾದಿಗಳು ಬರುತ್ತಿರುವುದರ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಆಹಾರ ಮತ್ತು ನಾಗರಿಕ ಪೂರೈಕೆ, ಸಂಸದೀಯ ಮತ್ತು ನಗರಾಭಿವೃದ್ಧಿ ಖಾತೆ ಸಚಿವರು). — ರಾಜಾಜಿನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ಹಿಂದೆ ನೀರಿನ ಜೊತೆ ಮಣ್ಣು, ಹೆಂಟೆ ಇತ್ಯಾದಿಗಳು ಕೆಲವೆಡೆ ಎಣ್ಣೆ ವಾಸನೆಯಿಂದ ಕೂಡಿದ ನೀರು ಸರಬರಾಜಾಗುತ್ತಿದ್ದರ ಬಗ್ಗೆ.

ಸಧ್ಯದಲ್ಲಿ ಈ ಪ್ರದೇಶಗಳಿಗೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಸರಬರಾಜಾಗುತ್ತಿದೆ. ಕಳೆದ ವರ್ಷ ಜಲಾಶಯವು ಸಂಪೂರ್ಣವಾಗಿ ಬತ್ತಿ ಹೋಗಿದ್ದು ಡಿಸೆಂಬರ್ ೮೫ರಿಂದ ನೀರು ಸರಬರಾಜು ಮಾಡುವುದನ್ನು ನಿಲ್ಲಿಸಲಾಗಿತ್ತು. ಈ ಸಮಯದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರು ನಗರಕ್ಕೆ ನೀರು ತರುವ ಪ್ರಧಾನ ಕೊಳವೆಗಳಲ್ಲಿ ಹಿಂದೆ ಕಟ್ಟಿಕೊಂಡಿದ್ದ ತುಕ್ಕು ಹಿಡಿದ ಪದರಗಳು ಕಳಚಿ ಕೊಂಡು ಕೊಳವೆಯೊಳಗೆ ಉಳಿದು ಹೋಗಿತ್ತು.

ಏಪ್ರಿಲ್, ಮೇ, ಜೂನ್ ಮಾಹೆಗಳಲ್ಲಿ ಜಲಾಶಯಕ್ಕೆ ಅಲ್ಪ ಪ್ರಮಾಣದಲ್ಲಿ ಜಲಾಗಮನವಾಗಿದ್ದು ಪುನ: ಜೂನ್ ಮಾಹೆಯಿಂದ ನಗರಕ್ಕೆ ಈ ಜಲಾಶಯದಿಂದ ೨ ಎಂ. ಗ್ಯಾ. ನೀರು ಸರಬರಾಜು

ಮಾಡಲು ಪ್ರಾರಂಭಿಸಲಾಯಿತು. ಶುದ್ಧೀಕರಿಸಿದ ನೀರಂ ಪ್ರಧಾನ ಕೊಳವೆಗಳಲ್ಲಿ ಹಾದು ಬಂದಾಗ ಕೊಳವೆಯಲ್ಲಿ ಶೇಖರಣೆಯಾಗಿದ್ದ ಮಣ್ಣಿನ ಕಣಗಳು (ಸಿಲ್ಟ್) ದಿನವಹಿ ನೀರನ್ನು ಹೊರಗೆಬಿಟ್ಟರೂ ಸಹ ಅಲ್ಪ ಅಂಶದಲ್ಲಿ ರಾಜಾಜಿನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಸರಬರಾಜು ಆಯಿತು.

ಈ ನ್ಯೂನತೆಯು ಮಂಡಲಿಯ ಗಮನಕ್ಕೆ ಬಂದ ಕೂಡಲೇ, ತ್ವರಿತಗತಿಯಲ್ಲಿ ಸೂಕ್ತವಾದ ನಿವಾರಣಾ ಕಾರ್ಯಗಳನ್ನು ಅಂದರೆ ಕಲುಷಿತವಾದ ನೀರನ್ನು ಹೊರಗಟ್ಟುವುದರ ಮೂಲಕ ಹಾಗೂ ಕೊಳವೆಗಳನ್ನು ಪರಿಶುದ್ಧಗೊಳಿಸಿ ಶುದ್ಧವಾದ ನೀರನ್ನು ಸರಬರಾಜು ಮಾಡಲಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಂಥ ಹೇಳಿಕೆಯಂಸ್ನು ನೋಡಿದರೆ ಆಲ್ಲಿರತಕ್ಕ ವಾಸ್ತವಾಂಶಕ್ಕೂ ಮತ್ತು ಇವರ ಈ ಹೇಳಿಕೆಗೂ ತೀರಾ ತದ್ವಿರುದ್ಧವಾಗಿದೆ. ಅಧಿಕಾರಿಗಳು ಕೊಟ್ಟಂಥ ಹೇಳಿಕೆಯನ್ನು ಈ ಮಂತ್ರಿಗಳು ತಂದು ಓದಿದ್ದಾರೆ. ನಾನು ಈ ಕ್ಷೇತ್ರಕ್ಕೆ ಪ್ರತಿದಿನ ಹೋಗಲು ಸಾಧ್ಯವಾಗದಿದ್ದರೂ ದಿನಬಿಟ್ಟು ದಿನ ತಪ್ಪದೆ ಹೋಗುತ್ತಿದ್ದೇನೆ. ಆಲ್ಲಿ ಏನಂ ಪರಿಸ್ಥಿತಿ ಇದೆ ಎಂಬದನ್ನು ನೋಡಿಕೊಂಡು ಬರುತ್ತಿದ್ದೇನೆ. ಆದರೆ "ಈ ನ್ಯೂನತೆಯು ಮಂಡಲಿಯ ಗಮನಕ್ಕೆ ಬಂದಕೂಡಲೆ ತ್ವರಿತಗತಿಯಲ್ಲಿ ಸೂಕ್ತವಾದ ನಿವಾರಣಾ ಕಾರ್ಯಗಳನ್ನು ಎಂದರೆ ಕಲುಷಿತವಾದ ನೀರನ್ನು ಹೊರಗಟ್ಟುವುದರ ಮೂಲಕ ಹಾಗೂ ಕೊಳವೆಗಳನ್ನು ಪರಿಶುದ್ಧಗೊಳಿಸಿ ಶುದ್ಧವಾದನೀರನ್ನು ಸರಬರಾಜು ಮಾಡಲಾಗಿದೆ." ಎನ್ನತಕ್ಕ ಹೇಳಿಕೆಯನ್ನು ಇಲ್ಲಿ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಪ್ರಕಾಶ ನಗರ ಎಂದು ಇದೆ. ಇದೇರೀತಿ ರಾಜಾಜಿನಗರ ಏನೇ ಬ್ಲಾಕ್ ತಿನೇ ಬಾಕ್ಲೆ ತಿನೇ ಬ್ಲಾಕ್ ಎಲ್ಲಾ ಇವೆ. ನಾನು ಮೊನ್ನೆಯ ದಿವಸ ಅಲ್ಲೆಲ್ಲಾ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಬರುತ್ತಿರತಕ್ಕ ನೀರು ಕುಡಿಯುವುದಕ್ಕೆ ಯೋಗ್ಯವಾದುದಾಗಿಲ್ಲ. ಮೊದಲನೆಯ ದಿವಸ ಕೊಳಾಯಿ ನೀರಿನಲ್ಲಿ ಮಣ್ಣು ಸೇರಿ ಬರುತ್ತಿತ್ತು. ಈಗಅದು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ.ಆದರೆ ಈಗ ಎಣ್ಣೆಯ ತರಹ ನೀರುಬರುತ್ತಿದೆ. ಇದನ್ನು ನಾನೂ ನೋಡಿಕೊಂಡು ಬಂದಿದ್ದೇನೆ. ಆದರೂ ಕೂಡ ನಾವು ಈಗ ಅದನ್ನೆಲ್ಲಾ ಸರಿಮಾಡಿದ್ದೇವೆಂದು ಹೇಳುತ್ತಿರುವ ನಿಮ್ಮ ಮಾತನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ತಾವು ತಮ್ಮಲ್ಲಿರುವ ತಜ್ಞರನ್ನು ಕಳುಹಿಸಿ ಆಲ್ಲಿ ಎನ್‌ಕ್ವೈರಿ ಮಾಡಿಸಿದರೆ ಬಹಳ ಒಳ್ಳೆಯದು ಹುಬ್ಬಳಿ—ಧಾರವಾಡದಲ್ಲಿ ಇದೇರೀತಿ ಪ್ರಕರಣ ಕಂಡುಬಂದಾಗ ಕೂಡಲೇ ಅವರು ತಮ್ಮ ಅಧಿಕಾರಿಗಳನ್ನು ಕಳುಹಿಸಿ ಸೂಕ್ತ ವ್ಯವಸ್ಥೆ ಮಾಡಿದ್ದಾರೆ. ಅದು ಬಹಳ ಸಂತೋಷ. ಅದೇ ರೀತಿಯ ಪ್ರಕರಣ ನಮ್ಮ ರಾಜಾಜಿನಗರದ ಮತ್ತಿತರ ಪ್ರದೇಶಗಳಲ್ಲಿ ಕಂಡು ಬಂದಿರುವುದರಿಂದ ಅದನ್ನು ಸರಿಪಡಿಸುವ ಸಲುವಾಗಿ ತಾವು ಏನಂ ಕ್ರಮವನ್ನು ತಕ್ಷಣ ತೆಗೆದುಕೊಂಡಿದ್ದೀರೆಂದು ಗೊತ್ತಿಲ್ಲ. ಮೊದಲಂ ಒಂದೆರಡು ದಿವಸ ನೀರಿನ ಜೊತೆ ಮಣ್ಣು, ಹೆಂಟೆ, ಕೆಲವೆಡೆ ಎಣ್ಣೆ ಮಾಸನೆಯಿಂದ ಕೂಡಿದ ನೀರು ಸರಬರಾಜಾಗುತ್ತಿತ್ತು, ಆದರೆ ಈಗ ಅದನ್ನೆಲ್ಲಾ ಸರಿಪಡಿಸಿ ಶುದ್ಧವಾದ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದಂ ತಾವು ಹೇಳಿರುವುದನ್ನು ನೋಡಿದರೆ ಇದು ತಜ್ಞರು ಕೊಡತಕ್ಕಂಥ ಉತ್ತರವಲ್ಲ. ಈ ಪರಿಸ್ಥಿತಿ ಸಂಮಾರು ೨-೩ ತಿಂಗಳಿಂದಲೂ ಇದ್ದೇ ಇದೆ ಬೇಕಾದರೆ ಮಾನ್ಯ ಮಂತ್ರಿಗಳ್ಲಿ ನನ್ನ ಜೊತೆಗೆ ಬಂದರೆ ನಾನು ಕರೆದುಕೊಂಡುಹೋಗಿ ತೋರಿಸುತ್ತೇನೆ, ಅಲ್ಲಿಯ ಜನರು ಏನು ಹೇಳುತ್ತಿದ್ದಾರೆಂದರೆ, ಸ್ವಾಮಿ, ಈ ಕೊಳಾಯಿ ನೀರನ್ನು ಉಪಯೋಗಿಸಿಕೊಂಡು ನಾವು ಸ್ನಾನ ಮಾಡಿದರೆ ಮೈಯೆಲ್ಲಾ ಎಣ್ಣೆ ಆಗುತ್ತದೆ. ಆದ್ದರಿಂದ ನಾವು ಸ್ನಾನಕ್ಕೆ, ಕುಡಿಯುವುದಕ್ಕೆ ಬೋರ್‌ವೆಲ್ ನೀರನ್ನೇ ಉಪಯೋಗಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ನೀವು ಇಂಥ ಹೇಳಿಕೆಯನ್ನು ನೀಡಿ ಜನರಿಗೆ ಏತಕ್ಕೆ ಈರೀತಿ ಮೋಸ ಮಾಡುತ್ತಿದ್ದೀರಿ ? ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರು ಜವಾಬ್ದಾರರಿದ್ದಾರೆ? ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಶಿಕ್ಷೆ ಮಾಡಿ. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನನ್ನ ಕ್ಷೇತ್ರಕ್ಕೆ ನೀರನ್ನು ಕೊಡುತ್ತಿದ್ದೀರಿ. ನನ್ನ ಕ್ಷೇತ್ರದ ಜನರು ಏನು ಪಾಪ ಮಾಡಿದ್ದಾರೋ ಗೊತ್ತಿಲ. ಎನ್ನತಕ್ಕ ಮಾತನ್ನು ನಾನು ಮೊದಲಿನಿಂದಲೂ ಹೇಳುತ್ತಲೇ ಇದ್ದೇನೆ. ಏಕೆಂದರೆ ಬೆಂಗಳೂರುನಗರದ ಬಹು ತೇಕ ಭಾಗಗಳಿಗೆ ತಾವು ಕಾವೇರಿ ನೀರನ್ನು ಕೊಟ್ಟು ನನ್ನ ರಾಜಾಜಿನಗರ ಕ್ಷೇತ್ರಕ್ಕೆ ಮಾತ್ರ ತಿಪ್ಪಗೆ ಂಡನಹಳ್ಳಿ ಜಲಾಶಯದಿಂದ ನೀರನ್ನು ಕೊಡುತ್ತಿದ್ದೀರಿ. ಏತಕ್ಕೆ ಹೀಗೆ ಮಾಡುತ್ತಿದ್ದೀರೋ ಗೊತ್ತಿಲ್ಲ.

ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ವಿಷಯ ಸವಿಸ್ತರವಾಗಿರುವುದರಿಂದ ಇಷ್ಟುಮಾತ್ರ ಹೇಳಬಯಸುತ್ತೇನೆ. ತಕ್ಷಣ ಎನ್‌ಕ್ವೈರಿ ಮಾಡಿ ? ಜನರಿಗೆ ನೀರನ್ನು ಕುಡಿಯಲು ಒದಗಿಸದೆ ಇದ್ದರೆ ತಮಗೆ ಅವರು ಶಾಪವನ್ನು ಹಾಕುವುದಲ್ಲದೆ ಮಂತ್ರಿಗೆಯನ್ನು ಕೂಡ ಹಾಕುತ್ತಾರೆಂದು ಹೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ ನಾನು ನೇರವಾಗಿ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಕಳೆದ ೩–೪ ತಿಂಗಳಿಂದ ಮೂರು ಪ್ರಧಾನ ಕೊಳವೆಗಳ ಮುಂಖಾಂತರ ಬೆಂಗಳೂರು ನಗರಕ್ಕೆ ತಿಪ್ಪಗೊಂಡನಹಳ್ಳಿಯಿಂದ ನೀರಿನ ಸರಬರಾಜು ಆಗುತ್ತಿದ್ದುದು ಹೋದವರ್ಷ ಡಿಸೆಂಬರ್ ತಿಂಗಳಿಂದ ಜೂನ್‌ವರೆವಿಗೂ ಈ ಕೊಳವೆಗಳ ಮುಖಾಂತ ನೀರು ತೆಗೆದುಕೊಳ್ಳದೆ ಇದ್ದ ಪ್ರಯುಕ್ತ ಕೊಳವೆಗಳಲ್ಲಿ ತುಕ್ಕು ಹಿಡಿದಂಥ ಸಮಯದಲ್ಲಿ ರಿಪೇರಿ ಕೆಲಸ ನಡೆಯುತ್ತಿದ್ದು ಸ್ವಲ್ಪಮಟ್ಟಿನ ಮಲಿನ ದೋಷಪೂರಿತ ನೀರು ಸರಬರಾಜು ಆಗುತ್ತಿದ್ದುದು ನಿಜ. ಏತಕ್ಕೆಂದರೆ ರಿಪೇರಿ ಕೆಲಸ ನಡೆಯತಕ್ಕಂಥ ಸಂದರ್ಭದಲ್ಲಿ ಗ್ರೀಸ್ ಹಚ್ಚಿ ರಿಪೇರಿ ಮಾಡಬೇಕಾಗಿರುತ್ತದೆ. ರಿಪೇರಿ ಮಾಡಿದನಂತರ ನೀರನ್ನು ಬೆಂಗಳೂರು ನಗರಕ್ಕೆ ಹಾಯಿಸಲು ಪ್ರಯತ್ನ ಪಡಾಡಿದಮೇಲೆ ತುಕ್ಕುಹಿಡಿದ ಕೆಲವು ಅಂಶಗಳು ಮತ್ತು ಗ್ರೀಸ್ ಹಚ್ಚಿದ ಕೆಲವು ಅಂಶಗಳು ನೀರಿನಲ್ಲಿ ಬಂದುದು ನಿಜವೆಂದು ನಾನೇ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಸಚಿವರು ಒಪ್ಪಿಕೊಂಡಿರುತ್ತೇನೆಂದು ಹೇಳಿದುದಕ್ಕೆ ನಾನು ಅವರನ್ನು ಬಹಳವಾಗಿ ಶ್ಲಾಘನೆ ಮಾಡುತ್ತೇನೆ. ಮತ್ತೆ ನಾನು ಆರೋಪ ಮಾಡುವುದೇನೆಂದರೆ ನನ್ನ ಎರಡನೇಯ ಪ್ರಶ್ನೆಗೆ ಎಲ್ಲಾ ಮಾಡಿಸಿ ಬಿಟ್ಟಿದ್ದೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಹೇಳುವಾಗ ಹಲವಾರು ವಿಷಯಗಳನ್ನು ಹೇಳಿದ್ದಾರೆ. ಬಹಳ ವಿಘುಲವಾದ ಶಬ್ದಗಳನ್ನು ಉಪಯೋಗಿಸಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಡಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಕೊಡಿ

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಮಾತನಾಡುವಾಗ ಮೋಸ ಮಾಡಿದ್ದಾರೆ ಎಂದು ಹೇಳಿದರು. ನಾವು ಯಾರಿಗೂ ಮೋಸ ಮಾಡಿಲ್ಲ. ಸಾರ್ವಜನಿಕರ ಸೌಕರ್ಯಕ್ಕಾಗಿಯೇ, ಸಾರ್ವಜನಿಕರ ಸೇವೆ ಮಾಡುವುದಕ್ಕಾಗಿಯೇ ಈ ಸಂಸ್ಥೆ ಇರತಕ್ಕಂಥದ್ದಾಗಿರುತ್ತದೆ. ಬೆಂಗಳೂರು ಜಲ ಮಂಡಲಿಯವರಾಗಲಿ ನಾನಾಗಲಿ, ಸರ್ಕಾರವಾಗಲಿ ಯಾವ ವಿಧವಾದ ಮೋಸವನ್ನು ಮಾಡುತ್ತಿಲ್ಲ ವೆನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೂ ಕೂಡ ಏತಕ್ಕೆ ಈ ರೀತಿಯಾದ ಶಬ್ದಗಳನ್ನು ಉಪಯೋಗಿಸುತ್ತಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನಮಗಿರುವ ಆತಂಕವನ್ನು ತೋರಿಸಿಕೊಳ್ಳುವಂಥ ಶಬ್ದಗಳನ್ನು ಅದು ಕೂಡಿರತಕ್ಕಂಥದ್ದಾಗಿರುತ್ತದೆಯೇ ಹೊರತು ಮತ್ತೇನೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಸ್ವಲ್ಪ ಸಮಾಧಾನದಿಂದ ಕೇಳಿ. ನೀವು ಹೇಳುವುದು ಸತ್ಯಕ್ಕೆ ದೂರವಾದುದು ಮೋಸ ಮಾಡಿರುತ್ತಾರೆ ಎನ್ನುವ ಪದಗಳನ್ನು ಬಹಳ ವರ್ಷಗಳಿಂದಲೂ ಕೇಳಿ ರೂಢಿಯಾಗಿದೆ. ತೋದರೆಯಾಗಿರತಕ್ಕಂಥದ್ದು ಕಂಡುಬಂದಾಗ ಅನಿವಾರ್ಯ ಕೆಲಸದಿಂದಾಗಿ ಎಂದು ಜಲಮಂಡಲಿಯಂವರೇ ಹೇಳಿದ್ದಾರೆ. ಈಗಾಗಲೇ ಅನಿವಾರ್ಯ ಕೆಲಸಗಳನ್ನು ಅವರು ಮಂಗಿಸಿಯೂ ಇದ್ದಾರೆ. ಈವೊತ್ತು ಸಾಮಾನ್ಯ ಸದಸ್ಯರು ರಾಜಾಜಿನಗರ ಮತ್ತು ಪ್ರಕಾಶನಗರ ೧–೨–೩ ಭಾಗಗಳಲ್ಲಿ ತೊಂದರೆ ಇದೆ ಎಂದು ಹೇಳಿದ್ದಾರೆ. ನೀರು ಸರಬರಾಜು ಮಾಡತಕ್ಕಂಥ ೪–೫ ಪ್ರದೇಶಗಳಲ್ಲಿ ಮುಖ್ಯ ಇಂಜಿನೀಯರ್‌ರವರು ನೋಡಿಬಂದಮೇಲೆ ಅಲ್ಲಿ ನ್ಯೂನ್ಯತೆಗಳು ಕಂಡುಬಂದ ಮೇಲೆ ಅದನ್ನು ಶೀಘ್ರವಾಗಿ ಸರಿಪಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇನೆ. ಈ ವಿಷಯವನ್ನು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಮತ್ತೆ ಮಾನ್ಯ ಸದಸ್ಯರು ಹುಬ್ಬಳ್ಳಿಯಲ್ಲಿ ನಡೆದಿರತಕ್ಕಂಥ ವಿಚಾರವನ್ನು ಹೇಳಿದರು. ಅಲ್ಲಿ ನಡೆದಿರತಕ್ಕಂಥ ವಿಚಾರವೇಬೇರೆ, ಇಲ್ಲಿಯ ವಿಚಾರವೇ ಬೇರೆಯದಾಗಿರುತ್ತದೆ. ಎರಡಕ್ಕೂ ಹೊಂದಾಣಿಕೆ ಮಾಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ ಇದಕ್ಕೆ ಸೀಮಿತವಾದ ಸಮಸ್ಯೆಯನ್ನು ಗುರುತಿಸಿ ಪರಿಹಾರಕ್ರಮವನ್ನು ತೆಗೆದುಕೊಂಡಿದ್ದೇವೆ. ಆಕಸ್ಮಾತಾಗಿ ತೆಗೆದುಕೊಂಡಿರತಕ್ಕಂಥ ಪರಿಹಾರಕ್ರಮ ಸರಿಯಿಲ್ಲದ ಪಕ್ಷದಲ್ಲಿ ಅದನ್ನು ಬಗೆಹರಿಸಲು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ಇಂಜಿನಿಯರ್‌ರವರೂ ಕೂಡ ಹೇಳಿದ್ದಾರೆಂದು ಸನ್ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ — ಮಾನ್ಯ ಅಧ್ಯಕ್ಷರೇ ಒಂದು ವಿಷಯ ನಾನು ಹೇಳತಕ್ಕಂಥದ್ದು ಏನೆಂದರೆ ಮಾನ್ಯ ಸಚಿವರು ಅನೇಕ ವಿಷಯಗಳನ್ನು ಹೇಳಿದ್ದಾರೆ, ಮತ್ತೆ ಅವರೇ ಒಪ್ಪಿಕೊಂಡಿರು

ತ್ತಾರೆ, ಕಲುಷಿತವಾದ ನೀರು ಸರಬರಾಜು ಆಗಿದೆ, ಎಣ್ಣೆ ಹೋಗಿದೆ ಎಂದು ಅವರೇ ಒಪ್ಪಿಕೊಂಡಿರುವುದಕ್ಕೆ ಬಹಳ ಸಂತೋಷ.

ಎರಡನೆಯದಾಗಿ, ಜನರಿಗೆ ಮೋಸ ಮಾಡಿದ್ದಾರೆಂದು ಹೇಳಿದ್ದು ಏಕೆಂದರೆ, ವಾಟರ್ ಬೋರ್ಡಿಗೆ ಅಗೌರವ ತರತಕ್ಕಂಥ ದೃಷ್ಟಿಯಲ್ಲಿ ಅಲ್ಲಿಯ ಜನ ನಡೆದುದರಿಂದ ಆ ಒಂದು ದೃಷ್ಟಿಯಲ್ಲಿ ಹೇಳಿದ್ದೇನೆಯೇ ಹೊರತು ಮತ್ತೇನೂ ಇಲ್ಲ. ಪ್ರತಿ ವರ್ಷದಂತೆ ಮಾನ್ಯ ಚೀಫ್ ಇಂಜಿನಿಯರ್‌ರವರು ಇಲ್ಲಿ ನೀರು ಇಲ್ಲದಿರತಕ್ಕಂಥ ಸಂದರ್ಭದಲ್ಲಿ ಬಹಳವಾಗಿ ಸಹಾಯ ಮಾಡಿದ್ದಾರೆ. ಕಕ್ಷಣವೇ ಕ್ರಮ ತೆಗೆದುಕೊಂಡಿರುತ್ತಾರೆ. ಆದರಲ್ಲೇನು ಅಭ್ಯಂತರವಿಲ್ಲ. ಈ ಪ್ರಶ್ನೆ ಬಂದಮೇಲೆ ಮಣ್ಣೆನಹೆಂಟಿ ಎಣ್ಣೆ, ನೀರಿನಲ್ಲಿ ಮಿಶ್ರವಾಗಿ ಸರಬರಾಜು ಆಗಿರುವ ಬಗ್ಗೆ, ಹಲವಾರು ಜನರಿಂದ ದೂರುಗಳು ಹೋದ ಮೇಲೆ, ಅದು ಇಲ್ಲಿಯತನಕ ಇತ್ಯರ್ಥವಾಗಿಲ್ಲ. ಅದು ಸರಿಹೋಗುತ್ತದೆ, ಸರಿಹೋಗುತ್ತದೆಂದು ಹೇಳುತ್ತಲೇ ಇದ್ದಾರೆ. ಈ ಒಂದು ದೋಷ ಹಾಗೆಯೇ ಉಳಿದುಕೊಂಡು ಬಂದಿರುವುದರಿಂದ ಜನರು ತುಂಬ ಬೇಸರಗೊಂಡಿದ್ದಾರೆ. ಇದು ಒಂದು ರೀತಿಯಾದ ವಂಚನೆಯಂದಾಗಿದೆ ಎಂದು ಹೇಳಿರುತ್ತೇನೆಯೇ ಹೊರತು ಮೋಸಮಾಡಿದ್ದಾರೆಂದು ಹೇಳಲಿಲ್ಲ. ಮಾನ್ಯ ಸಚಿವರೇ ಹೇಳಿದರು ತಾವೇ ಖುದ್ದು ನೋಡಿದ್ದೇವೆಂದು. ಹಾಗೇನಾದರೂ ಇದ್ದರೆ ಟೆಕ್ನಿಕಲಿ ಎನ್‌ಕ್ವಯರಿ ಮಾಡುವುದಾದರೆ ಮಾಡಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ತಾಂತ್ರಿಕವಾಗಿ ಪರಿಶೀಲನೆ ಮಾಡಬೇಕಾದಂಥ ಅವಶ್ಯಕತೆ ಏನೂ ಇಲ್ಲ. ತೊಂದರೆ ಏನು ಇರುತ್ತದೆಂಬುದು ತಿಳುವಳಿಕೆಗೆ ಬಂದಿರುತ್ತದೆ. ಅನಿವಾರ್ಯ ಕಾರಣ ಗಳಿಂದಾಗಿ ಕೆಲವು ಕಡೆ ಪರಿಪೂರ್ಣವಾಗಿ ಒಳ್ಳೆಯ ನೀರು ಸಿಗುವಂಥದ್ದಕ್ಕೆ ತೊಂದರೆ ಇದೆ ಎನ್ನುವ ಮಾತು ನಿಜವಾಗಿರುವುದರಿಂದ ಅದನ್ನು ಸರಿಪಡಿಸುವುದಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಂ. ಎನ್. ಕೃಷ್ಣನ್.— ಕಾವೇರಿಗೆ ಏನು ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.— ಈ ವಿಷಯವನ್ನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡೋಣ. ಕನ್‌ಫ್ಯೂಷನ್ ಮಾಡಿಕೊಳ್ಳುವುದು ಬೇಡ. ಮೈಸೂರಿನಲ್ಲಿ ನೀರು ಸರಬರಾಜು ಬಗ್ಗೆ ತೊಂದರೆ ಬಂದಾಗ ಸ್ಥಳಕ್ಕೆ ಪತ್ರಿಕಾ ಪ್ರತಿನಿಧಿಗಳನ್ನು ಕೂಡ ಕರೆದುಕೊಂಡು ಹೋಗಿ ಬಂದಿರುತ್ತೇನೆ. ಯಾರಿಗೂ ಮಾಯಾ ಮಂತ್ರ ಕಣ್ಣುಮುಚ್ಚಾಲೆ ಮಾಡತಕ್ಕಂಥ ಕೆಲಸ ಮಾಡುತ್ತಿಲ್ಲ. ತಪ್ಪಿದ್ದರೆ ತಪ್ಪು ಎಂದು ಹೇಳುತ್ತೇನೆ. ತಪ್ಪಿಲ್ಲದಿದ್ದರೆ ತಪ್ಪಿಲ್ಲವೆಂದು ಹೇಳುತ್ತೇನೆ. ನೀರಿನ ಸಮಸ್ಯೆ ಆದಂಥ ಸಮಯದಲ್ಲಿ ನೀರಿನ ಬವಣೆ ಇದ್ದಂಥ ಸಮಯದಲ್ಲಿ ಜನರ ಕಷ್ಟದಲ್ಲಿ ಭಾಗಿಯಾಗಿರತಕ್ಕಂಥದ್ದು ಮಾನ್ಯ ಸದಸ್ಯರಿಗೆ ಗೊತ್ತಿರತಕ್ಕಂಥ ವಿಚಾರ.

ಶ್ರೀ ಎಂ. ಎಸ್. ಕೃಷ್ಣನ್.— ನಾನೂ ಒಪ್ಪಿಕೊಂಡಿರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಆದರೂ ತಾವು ಮಾತನಾಡತಕ್ಕಂಥ ಧಾಟಿ, ಬಳಸತಕ್ಕಂಥ ಶಬ್ದಗಳು ತಮಗೆ ಗೊತ್ತಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನಾನು ಯಾರನ್ನು ಕಣ್ಣುಮುಚ್ಚಾಲೆ ಯಾಡುತ್ತಿದ್ದಾರೆಂದು ಹೇಳಲಿಲ್ಲ. ಮತ್ತೆ ಯಾರನ್ನು ಕೆಣಕಬೇಕೆಂದು ಮಾತನಾಡಲಿಲ್ಲ. ತಾವು ಪದೇ ಪದೇ ಕೆಣಕುತ್ತಿರುವುದು ಸರಿಯಾದುದಲ್ಲ.

ಅಧ್ಯಕ್ಷರು.— ಈಗ ಹಿಂದಿನ ನಿಯಮದ ಮೇರೆಗೆ ತೆಗೆದುಕೊಳ್ಳೋಣ.

ನಿಯಮ ಹಿಂದಿನ ಮೇರೆಗೆ

(i) ಮೈಸೂರು ನಗರಕ್ಕೆ ಪಡಿತರ ವ್ಯವಸ್ಥೆಯಲ್ಲಿ ತಾರತಮ್ಯ ಇರುವುದು

ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ ಮೈಸೂರು ಮತ್ತು ಬೆಂಗಳೂರು ನಗರದಲ್ಲಿ ಸರ್ಕಾರವು ಪಡಿತರ ವ್ಯವಸ್ಥೆಯನ್ನು ನಡೆಸುತ್ತಿರುವುದು ಸರಿಯಷ್ಟೆ, ಮೈಸೂರು ನಗರವು ಬೆಂಗಳೂರಿನಂತೆ ಕರ್ನಾಟಕದಲ್ಲಿ ಎರಡನೆಯ ಕೈಗಾರಿಕಾ ನಗರ ಆದರೂ ಬೆಂಗಳೂರು ನಾಗರೀಕರಿಗೂ